C.C-872/2025

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 13.03.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ. ಕೆ.ಎಂ.ಎನ್ ರವರಿಂದಃ**

**1.** ನನಗೆ ಫಿರ್ಯಾದಿ ಯಾರು ಎಂದು ಗೊತ್ತಿಲ್ಲ. ನಿಪಿ–1 ಅನ್ನು ನಾನು ಬರೆದುಕೊಟ್ಟಿಲ್ಲ. ನಿಪಿ–1 ರಲ್ಲಿನ ಸಹಿ ನನ್ನದು ಎನ್ನುವುದು ಸರಿಯಲ್ಲ. ನಾನು ಸರ್ಕಾರಿ ನೌಕರನೆಂದರೆ ಸರಿ. ಸಾಮಾನ್ಯವಾಗಿ ಸರ್ಕಾರಿ ನೌಕರರು ಮನೆಯನ್ನು ಬಾಡಿಗೆಗೆ ಕೇಳಿದರೆ ಯಾರು ನಿರಾಕರಿಸುವುದಿಲ್ಲ ಎಂದರೆ ಸರಿ. ಮುಂದುವರೆದು ನಾನು ಫಿರ್ಯಾದಿಯ ಮನೆಯಲ್ಲಿ ಬಾಡಿಗೆಗೆ ಇರಲಿಲ್ಲ. ನನ್ನ ವಿರುದ್ಧ 5 ಚೆಕ್ ಬೌನ್ಸ್ ಕೇಸುಗಳು ನಡೆಯುತ್ತಿವೆ. ಸಿಸಿ 542/2025 ರಲ್ಲಿ ನನಗೆ ಶಿಕ್ಷೆ ಆಗಿದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೆ ಎನ್ನು ತ್ತಾರೆ.

**2.** ಫಿರ್ಯಾದಿಗೆ ನಾನು 55 ಸಾವಿರ ರೂ. ಬಾಡಿಗೆ ಹಣ ಕೊಡುವುದು ಬಾಕಿ ಇದೆ ಎಂದರೆ ಸರಿಯಲ್ಲ. ಫಿರ್ಯಾದಿಯಿಂದ ನಾನು 95 ಸಾವಿರ ರೂ.ಗಳನ್ನು ಕೈಗಡ ಸಾಲವಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಹಣ ಹಾಗೂ ನಾನು ಬಾಕಿ ಉಳಿಸಿಕೊಂಡಿದ್ದ 55 ಸಾವಿರ ರೂ. ಬಾಡಿಗೆ ಹಣ ಸೇರಿ ಫಿರ್ಯಾದಿಗೆ ಮರು ಪಾವತಿ ಮಾಡಬೇಕಾಗಿದ್ದ 1,50,000/– ರೂ.ಗಳಿಗೆ ನಾನು ನಿಪಿ–1 ರ ಚೆಕ್ ಅನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ನೀಡಿದ ಚೆಕ್ಕು ನಿಪಿ–2 ರಂತೆ ಬೌನ್ಸ್ ಆಗಿದೆ ಎಂದರೆ ಸರಿ.

ಆದರೆ ನಾನು ಫಿರ್ಯಾದಿಗೆ ಚೆಕ್ ಅನ್ನು ನೀಡಿಲ್ಲ ಎನ್ನುತ್ತಾರೆ. ನನ್ನ ಚೆಕ್ಕು ದುರುಪಯೋಗವಾಗಿದೆ ಎಂದು ಕಾನೂನಿನ ಕ್ರಮಕ್ಕಾಗಿ ಬ್ಯಾಂಕಿಗೆ ಅರ್ಜಿಯನ್ನು ನೀಡಿದ್ದೇನೆ. ಸದರಿ ಅರ್ಜಿಯ ಪ್ರತಿಯನ್ನು ಕೋರ್ಟಿಗೆ ಹಾಜರು ಪಡಿಸಬಲ್ಲೆ. ಚೆಕ್ ಬೌನ್ಸ್ ಆದ ಕುರಿತು ನಿಪಿ–3 ರಂತೆ ಫಿರ್ಯಾದಿ ನನಗೆ ನೋಟೀಸ್ ಅನ್ನು ಕೊಡಿಸಿದ್ದಾರೆ ಎಂದರೆ, ಸಾಕ್ಷಿಯು ನನಗೆ ನೋಟೀಸ್ ತಲುಪಿಲ್ಲ ಎಂದು ನುಡಿಯುತ್ತಾರೆ. ನಿಪಿ–1 ರಲ್ಲಿನ ಬರವಣಿಗೆ ಹಾಗೂ ಸಹಿ ನನ್ನದು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ಈಗ ಯುಪಿಐ ಮೂಲಕ ಸಾಮಾನ್ಯವಾಗಿ ವಹಿವಾಟುಗಳು ನಡೆಯುತ್ತವೆ ಎಂದರೆ ಸರಿ. ರಿಚರ್ಡ್ ರವರಿಗೆ ನಾನು ಫೋನ್ ಪೇ ಮೂಲಕ ಹಾಕಿರುವ ಹಣವು ನನ್ನ ಮತ್ತು ಜೋಸೇಫ್ ಲೋಬೋ ರವರಿಗೆ ಸಂಬಂಧಪಟ್ಟ ಹಣ ಅಲ್ಲ ಎಂದರೆ ಸರಿ. ಮುಂದುವರೆದು ಫಿರ್ಯಾದಿಯೊಂದಿಗೆ ನಾನು ಯಾವುದೇ ವ್ಯವಹಾರ ಮಾಡಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.